ಬಿ.ಆರ್. ಉಷಾ, ಕೆನಡಾ
ತಲೆಗೆ ಟೋಪಿ ಹಾಕೋದು ಅಂದ್ರೇನು?



ನುಣ್ಣಗೆ ಬೋಳಿಸಿದರೂ ಸಮಾಜಕ್ಕೆ ತಿಳಿಯದಂತಾಗಿಸುವುದು.

ಅನಸೂಯ ಟಿ., ಕೇದಿಗೆಮನೆ
ಮನೆಮಾತಾಗುವಷ್ಟು ಪ್ರಸಿದ್ಧಳಾಗಬೇಕೆಂದಿದ್ದೇನೆ, ಸುಲಭದ ದಾರಿ?
ಗಾಢ ನಂಬಿಕೆಗಳನ್ನು, ಗೌರವಾನ್ವಿತರನ್ನು ಹೀಯಾಳಿಸಿ. ಕೂಡಲೆ ಮನೆ, ವಾಹಿನಿಗಳ ಮಾತಾಗುತ್ತೀರಿ.

ಜಗದೀಶ ಬಿ. ಹೊಸೂರು, ಮೈಸೂರು
ಪ್ರತಿ ದಿನವೂ ಹೊಸ ವರ್ಷವಾಗಿದ್ದರೂ ಒಂದು ದಿನ ಮಾತ್ರ ವಿಶೇಷ ಕಾರ್ಯಕ್ರಮ ಮಾಡುವುದೇಕೆ?
ಪಾನನಿಯಮ. ಎಷ್ಟೇ ಕುಡಿದರೂ ಚಿಯರ್ಸ್ ಎನ್ನುವುದು ಮೊದಲ ಸಿಪ್ಪಿಗೆ ಮಾತ್ರ.

ವಿ. ಹೇಮಂತಕುಮಾರ್, ಬೆಂಗಳೂರು
ಹೆಂಡತಿಯನ್ನು ಒಂದೇ ಸಮನೆ ದೃಷ್ಟಿಸಿ ನೋಡಲು ಸಾಧ್ಯವೆ?



ಹೂಂ. ಅವಳು ನಿದ್ರಿಸುತ್ತಿರುವಾಗ.

ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು
ನಾವು ದೇಶವನ್ನು ಕಟ್ಟುತ್ತಿದ್ದೇವೋ ಅಥವಾ ಬಿಡಿಸುತ್ತಿದ್ದೇವೋ?
ದ್ವೇಷವನ್ನು ಕಟ್ಟುತ್ತಿದ್ದೇವೆ, ಬುದ್ಧಿವಂತರನ್ನು (ದೇಶದಿಂದ) ಬಿಡಿಸುತ್ತಿದ್ದೇವೆ.

ರಾಮಸ್ವಾಮಿ, ಭೀಮನಕಟ್ಟೆ
ವೋಟ್ ಬ್ಯಾಂಕ್ ಅಂತಾರಲ್ಲಾ, ಅಲ್ಲಿ ಮನ್ನಾ ಆಗುವ ಸಾಲ ಸಿಗುತ್ತಾ?
ನಮ್ಮನ್ನು ಮಂಗ್ಯಾ ಮಾಡುವ 'ಸಾಲಾ' ಸಿಗುತ್ತಾನೆ.

ಕೆ.ಎಚ್. ತೇಜೇಶ್ಚಂದ್ರ, ಕ್ಯಾತ್ಸಂದ್ರ
ದಾನ ಧರ್ಮಕ್ಕಿಂತ ಶ್ರೇಷ್ಠ ಯಾವುದು?
ಅವನ್ನು ಟ್ಯಾಕ್ಸ್ ಎಕ್ಸೆಂಪ್ಷನ್ನಿನ ಆಸೆಯಿಂದ ಮಾಡದಿರುವುದು.

ಬೂಕನಕೆರೆ ವಿಜೇಂದ್ರ, ಮೈಸೂರು
ಹುಚ್ಚರಿಗೂ 'ಸ್ನೇಹಿತರು' ಇರುತ್ತಾರಲ್ಲ?
ಕೆಲವು ಫೇಸ್‌ಬುಕ್ ಪೋಸ್ಟುಗಳನ್ನು ನೋಡಿದಾಗ ನನಗೂ ಹೀಗೇ ಅನಿಸಿದೆ.

ಮಂಡಿ ಕುಮಾರ್, ಬೆಂಗಳೂರು
ವಯಸ್ಸಾದವರಿಗೆ ನಾಲಿಗೆ ಚಪಲ ಹೆಚ್ಚು ಅನ್ನುತ್ತಾರಲ್ಲಾ?
ಸಾಮರ್ಥ್ಯ ಕಡಿಮೆಯಾದಷ್ಟೂ ಚಪಲ ಹೆಚ್ಚಾಗುವುದು ಮನುಜನಿಯಮ.

ಜಯಲಕ್ಷ್ಮಿ ಉಪಾಧ್ಯಾಯ, ಕಂಚಾರ್ತಿ
ಮದುವೆಯ ಮೊದಲ ಜೀವನ ಚೆಂದವೋ ಮದುವೆಯ ನಂತರದ ಜೀವನ ಚೆಂದವೋ?
ದಿನದಿನವೂ ರೋಚಕ ತಿರುವುಗಳಿರುವ ಮದುವೆಯ ನಂತರದ ಜೀವನವೇ.

ಎನ್. ವೈದೇಹಿ, ಮೈಸೂರು
ಇತ್ತೀಚೆಗೆ ಕೆಲವು ಪೋಷಕರಿಗೆ ಅವರ ಮಕ್ಕಳನ್ನು ನಿಭಾಯಿಸುವುದು ಕ್ಲಿಷ್ಟವಾಗಿದೆಯಲ್ಲ?
ಇತ್ತೀಚೆಗೆ? ದುರ್ಯೋಧನನೂ ಧೃತರಾಷ್ಟ್ರನ ಹಿಡಿತಕ್ಕೆ ಸಿಕ್ಕಿರಲಿಲ್ಲವಲ್ಲ!

ಬಿ. ಚಂದ್ರೇಗೌಡ, ಬೆಂಗಳೂರು
ವ್ಯಕ್ತಿತ್ವದ ಮೆರುಗನ್ನು ಹೆಚ್ಚಿಸುವ ಬಗೆ ಹೇಗೆ?
'ಪೇಯ್ಡ್ ನ್ಯೂಸ್' ಪೇಪರ್ ಮತ್ತು ಚಾನಲ್‌ಗಳನ್ನು ಬಳಸಿರಿ.

ಜಯಶ್ರೀ, ಬೆಂಗಳೂರು
ಮಿಡಲ್ ಕ್ಲಾಸ್ ಮೆಂಟಾಲಿಟಿ ಎಂದರೆ ಏನು?
ದಾಸನಾಗಿದ್ದರೂ ವಿಶೇಷನಾಗಿರಬೇಕು ಎಂದು ಆಶಿಸುವುದು.

ಮಲ್ಲಿಕಾರ್ಜುನ, ಸುರಧೇನುಪುರ
ನಮ್ಮಿಂದಲೇ ರಾಜಕಾರಣಿಗಳು ಎಂದು ಮತದಾರರು ತಿಳಿಯುವುದೆಂದು?
ಓಟ್ ಹಾಕಲು ಭಿಕ್ಷೆ ಪಡೆಯುವ ದಿನದಂದು!

## ವಾರದ ಪ್ರಶ್ನೆ

ಪಿ. ಜಯವಂತ ಪೈ, ಕುಂದಾಪುರ
ಸಂಚಾರಿ ಸ್ಮಶಾನಗಳೂ ಬಂದಿವೆಯಲ್ಲ?
ಸತ್ತಂತೆ ಬದುಕಿರುವ 'ಸಂಚಾರಿ ಶವಗಳು' ಇರುವಾಗ ಇದೇನು ಮಹಾ!

ಮಹಾವೀರ ಕಾಸರ, ಶಿವಮೊಗ್ಗ
ಮಾಂಸಾಹಾರಿ ಪ್ರಾಣಿಗಳನ್ನು ಮಾಂಸಾಹಾರಿ ಪ್ರಾಣಿಗಳು ತಿನ್ನುವುದಿಲ್ಲ. ಆದರೆ ಮನುಷ್ಯರು?
ಏನು ಬೇಕಾದರೂ ತಿನ್ನಬಹುದು; ಅವರು ಇಡೀ ಜಗವನ್ನೇ ಕಬಳಿಸುವ ವಿಶ್ವಾಹಾರಿಗಳು.

ವಿ. ಹಮೀದ್, ವಿಟ್ಲ
ರಾಜಕಾರಣಿಯ ಬೆನ್ನುನೋವಿಗೆ ಕಾರಣವೇನಿರಬಹುದು?
ತನ್ನ ಚೇಲಾಗಳೇ ಲೇಶವೂ ತಿಳಿಯದಂತೆ ಆಗಾಗ್ಗೆ ಹಾಕುವ ಚೂರಿಗಳು.

ಚಿಕ್ಕೋಬನಹಳ್ಳಿ ಚಾಂದ್ ಬಾಷ, ತಳಕು
'ಕನಸು ನಿಮ್ಮದು, ಲೋನ್ ನಮ್ಮದು' ಎಂದಿತು ಜಾಹೀರಾತು. ಬಡ್ಡಿ ಯಾರದು?



ಜಾಮೀನು ನಿಂತ ದಡ್ಡನದು.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ನಾವು ಮನಸ್ಸಿನಿಂದ ಮಾತನಾಡಬೇಕೋ, ಮೆದುಳಿನಿಂದ ಮಾತನಾಡಬೇಕೋ?
ಮನದ ಮಾತನ್ನು ಮೆದುಳಿನಲ್ಲಿ ಜರಡಿ ಹಿಡಿದು, ನಾಲಿಗೆಯಿಂದಾಡುವುದು ಉತ್ತಮ.

ರಾಜೀವ್ ಕುಮಾರ್, ದಾವಣಗೆರೆ
ನಾಯಿಯ ನಿಯತ್ತಿಗೂ ಮಾನವನ ನಿಯತ್ತಿಗೂ ವ್ಯತ್ಯಾಸವೇನು?
ಮಾನವನ ನಿಯತ್ತಿಗೆ ನಿರ್ದಿಷ್ಟವಾದ ಬೆಲೆ ಕಟ್ಟಬಹುದು.

ಕಾವ್ಯಶ್ರೀ ಪತ್ರಿಮಠ, ಶೋರಾಪುರ
ಯಾರಿಗೆ 'ಸರ್ವಜ್ಞ' ಎನ್ನಬೇಕು?
ಟೆನಿಸ್‌ನಲ್ಲಿ ಸರ್ವ್ ಮಾಡುವಾಗಲೇ ಫಾಲ್ಟ್ ಮಾಡುವ ಅಜ್ಞನಿಗೆ.

■ ರಾಮ್